**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

ಸ್ಪೆಷಲ್ ಮೊಕದ್ದಮೆ ನಂಃ 24/2022

ಸಾಕ್ಷಿದಾರರ ಹೆಸರು - ಮಲ್ಲಿಕಾರ್ಜುನ.ಬಿ.ಎಂ. ಪಿಡಬ್ಲೂ -12
ತಂದೆಯ ಹೆಸರು - ಮಲ್ಲಿಕಾರ್ಜನಪ್ಪ ಸಿಡಬ್ಲೂ - 21
ವಯಸ್ಸು - 57 ವರ್ಷ
ಉದ್ಯೋಗ - ಸಹಾಯಕ ಕಾರ್ಯಪಾಲಕ ಅಭಿಯಂತರರು , ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು
ವಾಸ ಸ್ಥಳ - ಚಿಕ್ಕಮಗಳೂರು

(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)

ದಿನಾಂಕಃ 22-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನಾನು ದಿಃ 15-09-2020 ರಿಂದ 20-09-2022 ರವರೆಗೆ ಸಹಾಯಕ ಇಂಜಿನಿಯರ್ ಆಗಿ ಚಿಕ್ಕಮಗಳೂರು

ಲೋಕೋಪಯೋಗಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನು.

2. ದಿನಾಂಕಃ 29-11-2021 ರಂದು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರು ನಮ್ಮ ಲೋಕೋಪಯೋಗಿ ಇಲಾಖೆಗೆ ಮನವಿಯನ್ನು ಸಲ್ಲಿಸಿ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 352/2021 ಕ್ಕೆ ಸಂಬಂಧಿಸಿದಂತೆ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಡುವಂತೆ ಕೋರಿದ್ದರು. ಸದರಿ ಮನವಿಯು ನಮ್ಮ ಕಛೇರಿಯಲ್ಲಿ ಅದೇ ದಿನ ಸ್ವೀಕೃತಗೊಂಡಿರುತ್ತದೆ. ಸದರಿ ಮನವಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಮನವಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.27 ಎಂದು ಗುರುತಿಸಲಾಯಿತು.

3. ಸದರಿ ಮನವಿಯ ಮೇರೆಗೆ ಅದೇ ದಿನ ಅಂದರೆ ದಿನಾಂಕಃ 29-11-2021 ರಂದು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಮಹಿಳಾ ಪಿಸಿ.82 ಆದ ಚಾಸಾ.25 ನಾಗರತ್ನರವರು ನನ್ನನ್ನು ಕಬ್ಬಿನಹಳ್ಳಿ ಗ್ರಾಮದ ರಮೇಶ ಗೌಡ ಎಂಬುವವರಿಗೆ ಸೇರಿದ ಕಾಫಿ ಎಸ್ಟೇಟಿನ ಕೂಲಿಲೈನಿನಲ್ಲಿದ್ದ ಒಂದು ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಕೃತ್ಯ ನಡೆದ ಸ್ಥಳವನ್ನು ತೋರಿಸಿದರು. ನಂತರ ನಾನು ಸದರಿ ಸ್ಥಳವನ್ನು ಪರಿಶೀಲಿಸಿ ಅದರ ನಕ್ಷೆಯನ್ನು ತಯಾರಿಸಿರುತ್ತೇನೆ. ಸದರಿ ನಕ್ಷೆಯನ್ನು ನಮ್ಮ ಸಹಾಯಕ ಕಾರ್ಯಪಾಲಕ ಇಂಜಿನಿಯರವರಿಗೆ ನೀಡಿದ್ದು, ಅವರು ಅದನ್ನು ತಮ್ಮ ಪತ್ರದ ಮುಖಾಂತರ ಸಂಬಂಧಿಸಿದ ಪೊಲೀಸರಿಗೆ ದಿನಾಂಕಃ 09-12-2021 ರಂದು ನೀಡಿರುತ್ತಾರೆ. ಸದರಿ ದಾಖಲೆಗಳನ್ನು ಪೊಲೀಸರು ದಿಃ 13-12-2021 ರಂದು ಸ್ವೀಕರಿಸಿರುತ್ತಾರೆ. ಸದರಿ ನಕ್ಷೆ

ಮತ್ತು ಪತ್ರವನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.28 ಮತ್ತು ಪಿ.29 ಎಂದು ಗುರುತಿಸಲಾಯಿತು. ನಿಪಿ.28 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.28(ಎ) ಎಂದು ಗುರುತಿಸಲಾಯಿತು. ನಿಪಿ.16 ಫೋಟೋದಲ್ಲಿ ನಾನು ನಕ್ಷೆಯನ್ನು ತಯಾರಿಸಿದ ಮನೆ ಮತ್ತು ನಿಪಿ.3 ರಿಂದ ಪಿ.5 ಫೋಟೋಗಳಲ್ಲಿ ಸದರಿ ಮನೆಯಲ್ಲಿ ಕೃತ್ಯ ನಡೆದ ಸ್ಥಳ ಕಂಡುಬರುವುದಾಗಿ ನುಡಿದಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್ ವಕೀಲರಿಂದಃ</u>

(ಈ ಹಂತದಲ್ಲಿ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ಕುರಿತು ಧ್ವನಿ ಕೇಳಿಸುತ್ತಿದೆಯೇ ಎಂದು ಕೇಳಿ, ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು).

4. ಸ್ಥಳಕ್ಕೆ ಭೇಟಿ ನೀಡಿದ ಕೂಡಲೇ ಸ್ಥಳದಲ್ಲೇ ಸ್ಥಳದ ಕಚ್ಚಾ ನಕ್ಷೆಯನ್ನು ತಯಾರಿಸುವುದು ಕಡ್ಡಾಯ ಎಂದರೆ ಸರಿ. ಸಾಕ್ಷಿ ಮುಂದುವರೆದು ತಮ್ಮ ಬಳಿ ಇರುವ ಒಂದು ಕಚ್ಚಾ ನಕ್ಷೆಯನ್ನು ತೋರಿಸಿ ನಾನು ಅದನ್ನು ಸದರಿ ಸ್ಥಳದಲ್ಲಿ ತಯಾರಿಸಿದ್ದೇನೆ, ನಂತರ ಅದರ ಆಧಾರದ ಮೇರೆಗೆ ನಿಪಿ.28 ರಂತೆ ಪಕ್ಕಾ ನಕ್ಷೆಯನ್ನು ತಯಾರಿಸಿ ಕೊಟ್ಟಿದ್ದೇನೆ ಎನ್ನುತ್ತಾರೆ. ಸದರಿ ಕಚ್ಚಾ ನಕ್ಷೆಯನ್ನು ನೀವು ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿ.

5. ನಿಮಗೆ ಸ್ಥಳವನ್ನು ತೋರಿಸಿದವರ ಹೆಸರು, ಹುದ್ದೆಯ ವಿವರಗಳನ್ನು ನಕ್ಷೆಯಲ್ಲಿ ನಮೂದಿಸಬೇಕಾಗುತ್ತದೆ ಮತ್ತು ಅವರ ಸಹಿಯನ್ನು ಪಡೆಯಬೇಕಾಗುತ್ತದೆ ಎಂದರೆ ಸಾಕ್ಷಿ ಅವರ ಹೆಸರು ಮತ್ತು

ಹುದ್ದೆಯನ್ನು ನಿಪಿ.28 ರಲ್ಲಿ ನಮೂದು ಮಾಡಿದ್ದೇನೆ, ಆದರೆ ಅವರ ಸಹಿಯನ್ನು ಪಡೆದಿಲ್ಲ ಎನ್ನುತ್ತಾರೆ. ನಿಮಗೆ ಸ್ಥಳವನ್ನು ತೋರಿಸಿದ ಬಾಬ್ತು ಫೋಟೋ ತೆಗೆಯುವುದು ಕಡ್ಡಾಯ ಎಂದರೆ ಸಾಕ್ಷಿ ಆ ರೀತಿ ಯಾವುದೇ ಕಾನೂನು ಇಲ್ಲ ಎನ್ನುತ್ತಾರೆ.

6. ಹಲವಾರು ಎಸ್ಟೇಟುಗಳನ್ನು ಮತ್ತು ಜಮೀನುಗಳನ್ನು ದಾಟಿಕೊಂಡು ರಮೇಶಗೌಡರವರ ಎಸ್ಟೇಟಿಗೆ ಹೋಗಬೇಕಾಗುತ್ತದೆ ಎಂದರೆ ಸಾಕ್ಷಿ ಅದು ರಸ್ತೆ ಬದಿಯಲ್ಲೇ ಇತ್ತು ಎನ್ನುತ್ತಾರೆ. ಮನೆಯ ಒಳಗೆ ನಕ್ಷೆಯನ್ನು ತಯಾರಿಸಿದ್ದಾಗಿ ಹೇಳಿದ್ದೀರಿ ನಿಮಗೆ ಮನೆಯ ಕೀಯನ್ನು ಯಾರು ಕೊಟ್ಟರು ಎಂದರೆ ಸಾಕ್ಷಿ ನನ್ನನ್ನು ಪೊಲೀಸರು ಕರೆದುಕೊಂಡು ಹೋಗಿದ್ದರು, ಆಗ ಮನೆಯ ಬಾಗಿಲು ತೆರೆದಿತ್ತು ಎನ್ನುತ್ತಾರೆ. ನಿಪಿ.16 ಫೋಟೋದಲ್ಲಿ ಎರಡು ಮನೆಗಳು ಇರುವುದು ಕಂಡುಬರುತ್ತದೆ ಎಂದರೆ ಸಾಕ್ಷಿ ಎರಡು ಮನೆಗಳಿವೆ, ಅವು ಒಂದಕ್ಕೊಂದು ಹೊಂದಿಕೊಂಡಿದೆ ಎನ್ನುತ್ತಾರೆ. ಆ ರೀತಿ ಹೊಂದಿಕೊಂಡಂತೆ ಇದ್ದ ಮನೆಯನ್ನು ನಾನು ನಿಪಿ.28 ನಕ್ಷೆಯಲ್ಲಿ ಹಾಲ್ ನ ಎಡಭಾಗಕ್ಕೆ 'ಕೂಲಿಯಾಳುಗಳ ಮನೆ (ಮಂಗಳೂರು ಹೆಂಚಿನ ಮನೆ)' ಎಂದು ತೋರಿಸಿದ್ದೇನೆ. ಅದರ ಬಾಗಿಲನ್ನು ನೀವು ತೋರಿಸಿಲ್ಲ ಎಂದರೆ ಸರಿ. ಎರಡು ಮನೆಗಳು ಅಕ್ಕಪಕ್ಕದಲ್ಲಿರುವ ಕಾರಣ ಒಂದು ಮನೆಯಲ್ಲಿ ಜೋರಾದ ಶಬ್ಧವಾದರೆ ಮತ್ತೊಂದು ಮನೆಗೆ ಕೇಳಿಸುತ್ತದೆ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ